# ವೈಚಾರಿಕ ಆಧ್ಯಾತ್ಮಿಕತೆ ಮತಗಳಿಕೆಯ ಆಧ್ಯಾತ್ಮ, ಧರ್ಮ ಅಲ್ಲ: ಕವಿ ಸಿದ್ದಲಿಂಗಯ್ಯ

ಜನಮಾಧ್ಯಮ 23/12/18

ಸಿದ್ದಾಪುರ: ದಲಿತ ಬಂಡಾಯದ ಬೇರುಗಳು ನಮ್ಮ ಸಂಸ್ಕೃತಿಯಲ್ಲಿ ಇವೆ. ಆದ್ದರಿಂದ ದಲಿತ, ಬಂಡಾಯ ಸಾಹಿತ್ಯಕ್ಕೂ ವೈಚಾರಿಕ ಆಧ್ಯಾತ್ಮಿಕತೆಯ ಅಗತ್ಯ ಇದೆ ಎಂದು ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸಂಚಾಲಕ, ಕವಿ ಸಿದ್ದಲಿಂಗಯ್ಯ ಅಭಿಪ್ರಾಯಪಟ್ಟರು.

ಸಾಹಿತ್ಯ ಅಕಾಡೆಮಿ, ಶಿರಸಿಯ ಬಿ.ಎಚ್. ಶ್ರೀಧರ ಪ್ರಶಸ್ತಿ ಸಮಿತಿಯ ಆಶ್ರಯದಲ್ಲಿ ಪಟ್ಟಣದ ಎಂಜಿಸಿ ಕಲಾ, ವಾಣಿಜ್ಯ ಹಾಗೂ ಜಿಎಚ್ ಡಿ ವಿಜ್ಞಾನ ಕಾಲೇಜಿನಲ್ಲಿ ಶನಿವಾರ ನಡೆದ 'ಬಿ.ಎಚ್.ಶ್ರೀಧರ ಸಾಹಿತ್ಯಾವಲೋಕನ ಮತ್ತು ಜನ್ಮ ಶತಮಾನೋತ್ಸವ ವಿಚಾರ ಸಂಕಿರಣ' ಉದ್ಘಾಟಿಸಿ ಅವರು ಮಾತನಾಡಿದರು.

ವೈಚಾರಿಕ ಆಧ್ಯಾತ್ಮಿಕತೆ ಎಂದರೆ ಇಂದಿನ ಮತಗಳಿಕೆಯ ಆಧ್ಯಾತ್ಮ ಅಥವಾ ಧರ್ಮ ಅಲ್ಲ ಎಂದರು.

'ಬಿ.ಎಚ್.ಶ್ರೀಧರ ಅವರು ನೀತಿ ಪ್ರಧಾನ ಸಮಾಜ, ಸರ್ವಧರ್ಮ ಸಾಮರಸ್ಯ ಮತ್ತು ಭ್ರಷ್ಟಾಚಾರ ರಹಿತ ಆಡಳಿತವನ್ನು ಪ್ರತಿಪಾದನೆ ಮಾಡಿದ್ದರು. ಅವರು ಪರಂಪರೆ ಹಾಗೂ ಆಧುನಿಕತೆಯ ಸಮನ್ವಯತೆಯನ್ನು ಸಾಧಿಸಿದ್ದರು. ಅವರ ಚಿಂತನೆಗಳು ಜಿಜ್ಞಾಸೆಗೆ ಒಳಪಡಬೇಕಾದ ಅಗತ್ಯ ಇದೆ ಎಂದರು. ಇಂದು ಭ್ರಷ್ಟಾಚಾರ ಶಿಷ್ಟಾಚಾರವಾಗಿದೆ. ಭ್ರಷ್ಟಾಚಾರಿಗಳೇ ಆದರ್ಶ ಪುರುಷರರಾಗಿದ್ದಾರೆ. ಭ್ರಷ್ಟಾಚಾರ ತಳದಿಂದ ತುದಿಯವರಗೆ ವ್ಯಾಪಿಸಿದ್ದು, ಗಾಂಧಿವಾದಿಯೂ ನಕ್ಸಲೀಯನಾಗುವ ಪರಿಸ್ಥಿತಿ ಇದೆ. ಆದ್ದರಿಂದ ಭ್ರಷ್ಟಾಚಾರ ತೊಡೆದುಹಾಕುವಂತಹ ಶಕ್ತಿಗಳು ಪ್ರಬಲರಾಗಬೇಕು ಎಂದರು.

ಪ್ರಾಚಾರ್ಯೆ ಪ್ರೊ. ಜಯಂತಿ ಶಾನಭಾಗ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಿಕ್ಷಣ ಪ್ರಸಾರಕ ಸಮಿತಿ ಉಪಾಧ್ಯಕ್ಷ ಡಾ. ಶಶಿಭೂಷಣ ಹೆಗಡೆ, ಬಿ.ಎಚ್. ಶ್ರೀಧರ ಪ್ರಶಸ್ತಿ ಸಮಿತಿಯ ಕಾರ್ಯದರ್ಶಿ ರಾಜಶೇಖರ ಹೆಬ್ಬಾರ, ಲೇಖಕ ಎಂ.ಜಿ.ಹೆಗಡೆ ಇದ್ದರು.

ವಿಶ್ವನಾಥ ಹಿರೇಮಠ ಸಂಗಡಿಗರು ಭಾವಗೀತೆ ಹಾಡಿದರು. ಸುರೇಶ ಎಂ. ಸ್ವಾಗತಿಸಿದರು. ವಿನಾಯಕ ವಂದಿಸಿದರು. ಪೂರ್ಣಿಮಾ ಭಟ್ಟ ನಿರೂಪಿಸಿದರು.




'ಬಿ.ಎಚ್.ಶ್ರೀಧರ ಸಾಹಿತ್ಯಾವಲೋಕನ ಮತ್ತು ಜನ್ಮ ಶತಮಾನೋತ್ಸವ ವಿಚಾರ ಸಂಕಿರಣ' ಉದ್ಘಾಟನೆ.

# ಸಾಹಿತ್ಯ ಅಕಾಡೆಮಿ ಸದಸ್ಯ ಸಿದ್ಧಲಿಂಗಯ್ಯ ಕಳವಳ

# ಶಿಷ್ಟಾಚಾರವಾಗಿ ಬದಲಾದ ಭ್ರಷ್ಟಾಚಾರ

ಪ್ರಜಾವಾಣಿ ವಾರ್ತೆ



ಬಿ.ಎಚ್.ಶ್ರೀಧರ ಸಾಹಿತ್ಯಾವಲೋಕನ ಹಾಗೂ ಜನ್ಮ ಶತಮಾನೋತ್ಸವ ವಿಚಾರ ಸಂಕಿರಣದಲ್ಲಿ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸಂಚಾಲಕ ಸಿದ್ಧಲಿಂಗಯ್ಯ ಅವರು ಮಾತನಾಡಿದರು

ಸಿದ್ದಾಪುರ: 'ದಲಿತ, ಬಂಡಾಯ ಸಾಹಿತ್ಯಕ್ಕೂ ವೈಚಾರಿಕ ಆಧ್ಯಾತ್ಮಿಕತೆಯ ಅಗತ್ಯವಿದೆ' ಎಂದು ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸಂಚಾಲಕ ಸಿದ್ಧಲಿಂಗಯ್ಯ ಅಭಿಪ್ರಾಯಪಟ್ಟರು.

ಸಾಹಿತ್ಯ ಅಕಾಡೆಮಿ, ಶಿರಸಿಯ ಬಿ.ಎಚ್.ಶ್ರೀಧರ ಪ್ರಶಸ್ತಿ ಸಮಿತಿಯ ಆಶ್ರಯದಲ್ಲಿ ಪಟ್ಟಣದ ಎಂಜಿಸಿ ಕಲಾ, ವಾಣಿಜ್ಯ ಹಾಗೂ ಜಿಎಚ್‌ಡಿ ವಿಜ್ಞಾನ ಕಾಲೇಜಿನಲ್ಲಿ ಶನಿವಾರ ನಡೆದ 'ಬಿ.ಎಚ್.ಶ್ರೀಧರ ಸಾಹಿತ್ಯಾವಲೋಕನ ಮತ್ತು ಜನ್ಮ ಶತಮಾನೋತ್ಸವ ವಿಚಾರ ಸಂಕಿರಣ' ಉದ್ಘಾಟಿಸಿ ಅವರು ಮಾತನಾಡಿದರು.

'ದಲಿತ ಬಂಡಾಯದ ಬೇರುಗಳು ನಮ್ಮ ಸಂಸ್ಕೃತಿಯಲ್ಲಿ ಮತ್ತು ದೇಸಿ ಮೂಲದಲ್ಲಿ ಇವೆ. ವೈಚಾರಿಕ ಆಧ್ಯಾತ್ಮಿಕತೆ ಎಂದರೆ ಇಂದಿನ ಮತ ಗಳಿಕೆಯ ಅಧ್ಯಾತ್ಮ ಅಥವಾ ಧರ್ಮ ಅಲ್ಲ' ಎಂದರು.

'ನೀತಿ ಪ್ರಧಾನ ಸಮಾಜ, ಸರ್ವಧರ್ಮ ಸಾಮರಸ್ಯ ಮತ್ತು ಭ್ರಷ್ಟಾಚಾರ ರಹಿತ ಆಡಳಿತವನ್ನು ಬಿ.ಎಚ್.ಶ್ರೀಧರ ಪ್ರತಿಪಾದನೆ ಮಾಡಿದ್ದರು. ಅವರ ಚಿಂತನೆಗೆ ವಿರುದ್ಧವಾಗಿ ಇಂದು ಭ್ರಷ್ಟಾಚಾರ ಶಿಷ್ಟಾಚಾರವಾಗಿದೆ. ಭ್ರಷ್ಟಾಚಾರಿಗಳೇ ಆದರ್ಶ ಪುರುಷರಾಗಿದ್ದಾರೆ. ಭ್ರಷ್ಟಾಚಾರ ತಳದಿಂದ ತುದಿಯವರೆಗೆ ವ್ಯಾಪಿಸಿದ್ದು, ಗಾಂಧಿವಾದಿಯೂ ನಕ್ಸಲೀಯನಾಗುವ ಪರಿಸ್ಥಿತಿ ಇದೆ. ಆದ್ದರಿಂದ ಭ್ರಷ್ಟಾಚಾರ ತೊಡೆದು ಹಾಕುವ ಶಕ್ತಿಗಳು ಪ್ರಬಲರಾಗಬೇಕು' ಎಂದರು.

ಪ್ರಾಚಾರ್ಯೆ ಪ್ರೊ. ಜಯಂತಿ ಶಾನಭಾಗ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಿಕ್ಷಣ ಪ್ರಸಾರಕ ಸಮಿತಿ ಉಪಾಧ್ಯಕ್ಷ ಡಾ.ಶಶಿಭೂಷಣ ಹೆಗಡೆ, ಬಿ.ಎಚ್.ಶ್ರೀಧರ ಪ್ರಶಸ್ತಿ ಸಮಿತಿಯ ಕಾರ್ಯದರ್ಶಿ ರಾಜಶೇಖರ ಹೆಬ್ಬಾರ, ಲೇಖಕ ಎಂ.ಜಿ.ಹೆಗಡೆ ಇದ್ದರು.

ವಿಶ್ವನಾಥ ಹಿರೇಮಠ ಸಂಗಡಿಗರು ಭಾವಗೀತೆ ಹಾಡಿದರು.